ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು).—

ಅ) ಕಾರ್ಗಲ್–ಜೋಗ ಅಧಿಸೂಚಿತ ಸಮಿತಿಯು ಅಸ್ತಿತ್ವಕ್ಕೆ ಬಂದು ಸುಮಾರು ೪½ ವರ್ಷಗಳಾಯಿತು. ಇದರ ಆದಾಯ ರೂ. ೧ ಲಕ್ಷ (ಅಭಿವೃದ್ಧಿ ಗ್ರ್ಯಾಂಟ್) ಮತ್ತು ಖರ್ಚು ೭೫,೦೦೦ ರೂಪಾಯಿಗಳು. ಇದು ೭ ಸಭೆಗಳನ್ನು ನಡೆಸಿದೆ. ಒಟ್ಟು ೪೨ ನಿವೇಶನಗಳನ್ನು ಹಂಚಿದ್ದು ೨೨ ಭಾಗ್ಯ ಮಂದಿರಗಳನ್ನು ಮಂಜೂರು ಆಗಿವೆ.

ಆ) ಸಾರ್ವಜನಿಕ ಮೂತ್ರಿ, ಒಳಚರಂಡಿ ಮತ್ತು ತಂಗುತಾಣವನ್ನು ಕಟ್ಟಿಸುವ ಯೋಜನೆಗಳಿವೆ. ಈ ಮೊದಲು ಸತ್ಯಾಗ್ರಹ ನಡೆದಿತು.

ಇ) ಕರ್ನಾಟಕ ವಿದ್ಯುತ್ ಮಂಡಳಿ ವಿದ್ಯುತ್ ದೀಪದ ಸೌಲಭ್ಯವನ್ನು ಒದಗಿಸಿದೆ.

ಈ) ಅವಕಾಶ ಮಾಡಲಾಗಿದೆ.

ಹರಿಜನಡಾ ಹಾಗೂ ಲಂಬಾಣಿ ತಾಂಡಗಳಲ್ಲಿ ಲೈಸನ್ಸ್ ಇಲ್ಲದೆ ಮದ್ಯಪಾನದ ಅಂಗಡಿಗಳು ಇರುವ ಬಗ್ಗೆ

(೩೦೧) ಶ್ರೀ. ಹೆಗ್ಗಪ್ಪ ಲಮಾಣಿ (ಬ್ಯಾಡಗಿ).—ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರವಾನಗಿ ಇಲ್ಲದೆ ಹರಿಜನವಾಡಾ ಹಾಗೂ ಲಂಬಾಣಿ ತಾಂಡಗಳಲ್ಲಿ ಮದ್ಯಪಾನದ ಅಂಗಡಿಗಳನ್ನು ನಡೆಸುತ್ತಿರುವ ಸರಕಾರದವರ ವಿಚಾರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅಂತಹ ಅಂಗಡಿಗಳನ್ನು ಮುಚ್ಚಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಇ) ತಾಲೂಕಿನ ಸವಿಾಪದಲ್ಲಿಯೇ ಇರುವ ಮದ್ಯಪಾನದ ಅಂಗಡಿಗಳನ್ನು ಸರಕಾರದವರೆ ಮುಚ್ಚುವ ಪ್ರಯತ್ನ ಮಾಡುವರೆ, ಹಾಗೂ ಅಂಥವರ ವಿರುದ್ಧ ಸರಕಾರದವರು ಯಾವ ಕ್ರಮ ಕೈಗೊಳ್ಳುವರು ?

ಶ್ರೀ ಜೆ. ಹೆಚ್. ಪಟೀಲ್ (ಮಾನ್ಯ ಅಬಕಾರಿ ಮಂತ್ರಿಗಳು).—

ಅ) ಇಲ್ಲ.

ಆ) ಉತ್ತರ "ಅ" ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತಾಲೂಕಿನ ಸವಿಾಪದಲ್ಲಿ ಇರುವ ಮದ್ಯಪಾನ ಅಂಗಡಿಗಳನ್ನು ಮುಚ್ಚಲು ಇಲಾಖೆ ಕ್ರಮ ಕೈಗೊಂಡಿದೆ ಮತ್ತು ಲೈಸನ್ಸ್‌ದಾರರಿಗೆ ಆಕ್ಷೇಪಣೆ ಇಲ್ಲದ ಸ್ಥಳಗಳಿಗೆ ಮದ್ಯಪಾನ ಅಂಗಡಿಗಳನ್ನು ಸ್ಥಳಾಂತರಿಸಲು ಸೂಚನೆ ನೀಡಲಾಗಿದೆ.

ಸುಳ್ಯ ತಾಲ್ಲೂಕಿನಲ್ಲಿ ಖಾಸಗಿ ವ್ಯಕ್ತಿಗಳು ಸರಕಾರಿ ಜಮೀನನ್ನು ರಬ್ಬರ ಕೃಷಿಗೋಸ್ಕರ ಅನಧಿಕೃತವಾಗಿ ಆಕ್ರಮಣ ಮಾಡಿರುವ ಬಗ್ಗೆ.

೩೦೩. ಶ್ರೀ ಬಾಕಿಲ ಹುಕ್ಕಪ್ಪ (ಸುಳ್ಯ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಂದಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ತಾಲ್ಲೂಕಿನಲ್ಲಿ ಖಾಸಗೀ ವ್ಯಕ್ತಿಗಳು ರಬ್ಬರ ಕೃಷಿ ಮಾಡುವ ಹೆಸರನಲ್ಲಿ ಸರಕಾರಿ ಜಮೀನನ್ನು ಆಕ್ರಮಣ ಮಾಡಿರುವದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ರೀತಿ ಆಕ್ರಮಣ ಮಾಡಿದ ಸರಕಾರಿ ಜಮೀನನ್ನು ಆಕ್ರಮಣ ಮಾಡಿದವರಿಗೆ ಸುಳ್ಯ ತಹಶೀಲ್ದಾರವರು ದರಖಾಸ್ತು ಕೊಟ್ಟಿರುವುದು ನಿಜವೇ ? ಹಾಗಿದ್ದಲ್ಲಿ ಎಷ್ಟು ಜನರಿಗೆ ಕೊಡಲಾಗಿದೆ ಮತ್ತು ಕೊಟ್ಟಿರುವ ವಿಸ್ತೀರ್ಣವೆಷ್ಟು ?

ಇ) ಈ ರೀತಿ ದರಖಾಸ್ತು ಪಡೆಯಲು ಅವರಿಗೆ ಯಾವುದಾದರೂ ಅರ್ಹತೆ ಇದೆಯೇ ? ಅರ್ಹತೆ ಇಲ್ಲವಾದಲ್ಲಿ ಸರಕಾರವು ಏನು ಕ್ರಮ ಕೈಗೊಳ್ಳಲಿದೆ ?

ಶ್ರೀ ವಿ. ಎಲ್. ಪಾಟೀಲ್ (ಮಾನ್ಯ ಕಂದಾಯ ಮಂತ್ರಿಗಳು).—

ಅ). ಇಲ್ಲ.

ಆ) ಇಲ್ಲ.

ಇ) ಉಪಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳ್ತಂಗಡಿ ತಾಲ್ಲೂಕಿನ ಕೊಯ್ಯಾರು ಸೇವಾ ಸಹಕಾರ ಸಂಘ ನಿಯಮಿತ ಮಂತ್ರಿ ಕಳಿಯ ಸೇವಾ ಸಹಕಾರ ಸಂಘ ನಿಯಮಿತಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ

೨೯೮. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ಕೊಯ್ಯಾರು ಮತ್ತು ಕಳಿಯ ಗ್ರಾಮದ ಸಹಕಾರ ಸಂಘಗಳಲ್ಲಿ ಬಡ ರೈತರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಸಾಲ ವಿತರಣೆಯಲ್ಲಿ ಅನ್ಯಾಯವಾಗಿರುವ ಬಗ್ಗೆ ಸರಕಾರಕ್ಕೆ ದೂರುಗಳು ಬಂದಿವೆಯೇ ?

ಆ) ಈ ಬಗ್ಗೆ ಸರಕಾರವು ಯಾವ ಕ್ರಮ ಕೈಗೊಂಡಿದೆ ?

ಇ) ಸಾಲವನ್ನು ಪಡೆಯದವರು ಸಾಲವನ್ನು ತೆಗೆದುಕೊಂಡಿರುವಂತೆ ಕಾಣಿಸಿರುವ ಹಾಗೂ ಅಲ್ಪ ಸಾಲವನ್ನು ಪಡೆದವರ ಸಾಲದ ಮೊಬಲಗು ಆಕ್ರಮವಾಗಿ ದ್ವಿಗುಣವಾಗಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದ್ದರೂ ಸಹ ಸರಕಾರದವರು ಸೊಂದಂತಹ ವ್ಯಕ್ತಿಗಳನ್ನು ಅಕ್ರಮ ಸಾಲದಿಂದ ಮುಕ್ತರನ್ನಾಗಿ ಮಾಡದಿರಲು ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—

ಅ) ಬಂದಿದೆ.

ಆ) ಕೊಯ್ಯಾರು ಸೇವಾ ಸಹಕಾರ ಸಂಘ :

ಕಾರ್ಯದರ್ಶಿ ಶ್ರೀ ರಮೇಶ ದೊಂಗ್ರೆಯವರನ್ನು ಅಮಾನತ್ತಿನಲ್ಲಿಡಿಸಲಾಗಿದೆ.

ತಪ್ಪು ಮಾಹಿತಿ ಮತ್ತು ಸುಳ್ಳು ದಾಖಲಾತಿ ಸೃಷ್ಟಿಸಿ ಮಾಡಿದುದಕ್ಕಾಗಿ ಸಂಬಂಧಪಟ್ಟ ಗ್ರಾಮ ಕರಣಿಕರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ. ಸಂಘದ ವ್ಯವಹಾರದಲ್ಲಿ ಕಂಡು ಬಂದ ಲೋಪದೋಷ ಹಾಗು ಅವ್ಯವಹಾರ, ಮೋಸ ದುರುಪಯೋಗ ಇವುಗಳನ್ನು ಸರಿಪಡಿಸಲು ಸುಸ್ಥಿತಿಗೆ ತರುವ ದೆಶೆಯಿಂದ ಸಂಘದ ಆಡಳಿತ ಸಮಿತಿಯನ್ನು ವಜಾ ಮಾಡಿ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ.

೨) ಕಳಿಯ ಸೇವಾ ಸಹಕಾರ ಸಂಘ ನಿಯಮಿತ ಮಹಾ ಕಾರ್ಯದರ್ಶಿ ದಿವಂಗತ ಶ್ರೀ ಎಸ್ ಎನ್. ಸಂಪಿಗೆ ತಾಯ ಇವರ ಆಸ್ತಿಯ ಮೇಲೆ ಸಹಕಾರ ಸಂಘಗಳ ಕಾಯಿದೆ ಕಲಂ ೧೦೩ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ.

೨೦ ಜನ ಸದಸ್ಯ ಸಾಲಗಾರರಿಂದ ಬಾಕಿ ಇರುವ ರೂ. ೧೧೫೫೦ನ್ನು ಸಂಘದ ಮಾಜಿ ಕಾರ್ಯದರ್ಶಿ ದಿವಂಗತ ಶ್ರೀ ಎಸ್. ಎನ್. ಸಂಪಿಗೆತ್ತಾಯ ಇವರ ಆಸ್ತಿಯ ಮೇಲೆ ಪ್ರಾಜ್ಯ ಮಾಡಿ ವಸೂಲಿ ಕ್ರಮ ತೆಗೆದುಕೊಳ್ಳಬೇಕಾಗಿದೆ. ರೂ. ೯೮೫೦ ಗಳನ್ನು ಸದಸ್ಯರಿಂದ ವಸೂಲಿ ಮಾಡಲಾಗಿದೆ.

ಇ) ಕೊಯ್ಯಾರು ಸೇವಾ ಸಹಕಾರ ಸಂಘ ನಿಯಮಿತ ಬ್ಯಾಂಕ್ ಇನ್‌ಸ್ಪೆಕ್ಟರ್‌ರವರು ಎಲ್ಲಾ ಸಾಲದಖಾತೆಗಳನ್ನು ಮತ್ತು ಖಾತೆದಾರರನ್ನು ತಪ್ಪಿರುದ್ದವಾಗಿ ಹೇಳಿಕೆ ನೀಡಿದ ವಿಚಾರವನ್ನು ಸಂಪರ್ಕಿಸಿ ತಪಾಸಣೆ ಮಾಡಿರುತ್ತಾರೆ. ಅವರೆಲ್ಲಾರೂ ಅವರವರ ಜವಾಬ್ದಾರಿಯನ್ನು ಬ್ಯಾಂಕಿನ ನಿರ್ದೇಶಕರ ಮತ್ತು ದಿವಂಗತ ಶ್ರೀ ಕೆ. ಬಿ. ರಮಿರಾಜ ಬಲ್ಲಾಳ ಇವರ ಮುಂದೆ ಕೂಡ ಒಪ್ಪಿರುತ್ತಾರೆ.